ದಿದ್ದರೆ ರೈತರು ಚಳುವಳಿ ಮಾಡಿ ಇದು ಉಗ್ರ ಸ್ವರೂಪ ತಾಳಬೇಕಾಗುತ್ತದೆ. ಮತ್ತು ಜನರಿಗೂ ಬಹಳ ತೊಂದರೆ ಆಗುತ್ತದೆ. ಸರಕಾರದವರು ಇದರ ಬಗ್ಗೆ ಕ್ರಮ ತೆಗೆದುಕೊಂಡು ವಿದ್ಯುಚ್ಛಕ್ತಿ ಒದಗಿಸ ಬೇಕು ಇಲ್ಲದಿದ್ದರೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಆಗುವುದಿಲ್ಲವೆಂದು ಹೇಳಲಿ.

ಶ್ರೀ ಲಕ್ಷ್ಮಿಸಾಗರ್.—ನಾಳೆಯ ದಿವಸ ಇದರ ಬಗ್ಗೆ ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಫಾದರ್ ಜೇಕಬ್ (ಮಾನ್ಯ ಸದಸ್ಯರ ಗೈರು ಹಾಜರಿ)

ಶ್ರೀ ಎಚ್. ಗಂಗಾಧರನ್ (ಮಾನ್ಯ ಸದಸ್ಯರ ಗೈರು ಹಾಜರಿ)

ಶ್ರೀ ಮುನಿಯಪ್ಪ (ಮಾನ್ಯ ಸದಸ್ಯರ ಗೈರು ಹಾಜರಿ)

ii) ಕಾರಂಜ ಯೋಜನೆಯ ಮುಳುಗಡೆ ಪ್ರದೇಶದ ಜನರ ಪುನರ್‌ವಸತಿ ಬಗ್ಗೆ.

ಶ್ರೀ ಬಸವರಾಜ ಪಾಟೀಲ್(ಹುಮ್ನಾಬಾದ).—ಬೀದರ್ ಜಿಲ್ಲೆಯಲ್ಲಿ ಕಾರಂಜಪ್ರಾಜೆಕ್ಟ್ ನಿರ್ಮಾಣ ದಿಂದ ಅನೇಕ ಹಳ್ಳಿಗಳು ಮುಳುಗಡೆ ಆಗುತ್ತಿವೆ. 28 ಹಳ್ಳಿಗಳಿಗೆ ಸೇರಿದ ಜಮೀನು ಏನು ಮುಳುಗಡೆ ಯಾಗಿದೆ. ಆ ರೈತರಿಗೆ ಪರಿಹಾರವಾಗಿ ಎಕರೆಗೆ ಮೂರು ಸಾವಿರ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಅಲ್ಲಿ ಮುಳುಗಡೆಯಾದಂತಹ ಜಮೀನು ಒಂದು ಎಕರೆ 30 ಸಾವಿರ ರೂಪಾಯಿಗಳು ಕೊಟ್ಟರೂ ಕೂಡಾ ಸಿಕ್ಕುವುದಿಲ್ಲ. ಆದರೆ ಸರಕಾರದವರು ಅವರಿಗೆ ಪರಿಹಾರ ಕೊಟ್ಟಿರುವುದು ಒಂದು ಎಕರೆಗೆ 3 ಸಾವಿರ ರೂಪಾಯಿಗಳು ಮಾತ್ರ. ಇದರಿಂದ ಬಹಳಷ್ಟು ಜನರಿಗೆ ಅನ್ಯಾಯವಾಗಿದೆ. ಎರಡನೇದಾಗಿ ಎಂಟು ಊರುಗಳು ಏನು ಮುಳುಗಡೆಯಾಗಿವೆ. ಆ ಊರುಗಳವರಿಗೆ ಬೇರೆ ಕಡೆ ಸ್ಥಳವನ್ನು ತೋರಿಸಿ ದ್ದಾರೆ. ಆ ಸ್ಥಳವೂ ಕೂಡಾ ಸಾಕಷ್ಟು ಆಗುತ್ತಿಲ್ಲ.

ಅಲ್ಲಿ ಮೂರು ಬೋರ್‌ವೆಲ್‌ಗಳನ್ನು ಹೊಡೆದಿದ್ದಾರೆ. ಶಾಲೆಗಳಿಲ್ಲ. ರಸ್ತೆಗಳ ಸರಿಯಾದ ವ್ಯವಸ್ಥೆ ಇಲ್ಲ. ರಸ್ತೆ ಮಾಡುವುದಕ್ಕೆ ಒಬ್ಬ ಕಂಟ್ರಾಕ್ಟರರಿಗೆ ಕೆಲಸವನ್ನು ಕೊಟ್ಟಿದ್ದಾರೆ.

ಅಲ್ಲಿ ಕರಿಯ ಭೂಮಿ ಇರುವುದರಿಂದ ರೋಡಿಗೆ ಮಣ್ಣನ್ನು ಹಾಕಿದರೂ ಕೂಡಾ ಮಳೆ ಬಂದ ಮೇಲೆ, ಕೊಚ್ಚಿಕೊಂಡು ಹೋಗುವುದು. ಇಂತಹ ಸಂದರ್ಭದಲ್ಲಿ ಯಾರೂ ಸಹ ರಸ್ತೆಯಲ್ಲಿ ನಡೆಯು ವುದಕ್ಕಾಗುವುದಿಲ್ಲ. ಇಲ್ಲಿ ರೈತರ ಭೂಮಿ ಹೆಚ್ಚಾಗಿ ಮುಳುಗಡೆಯಾಗಿ ಹೋಗಿದೆ. ಅವರಿಗೆ ಮೂರು ಸಾವಿರ ರೂಪಾಯಿಗಳ ಪರಿಹಾರ ಏನು ಕೊಡುತ್ತಿದ್ದೀರಿ ಅದರಿಂದ ಏನನ್ನೂ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಇದರಿಂದಾಗಿ ರೈತರಿಗೆ ತುಂಬಾ ಅನ್ಯಾಯವಾಗಿದೆ. ರೈತರು ಮನೆಗಳನ್ನು ಕಳೆದುಕೊಂಡು, ಭೂಮಿಯನ್ನು ಕಳೆದುಕೊಂಡು ವಿಪರೀತ ತೊಂದರೆಗೆ ಒಳಗಾಗಿದ್ದಾರೆ. ಅವರಿಗೆ 40–60 ಶೆಡ್ ಹಾಕಿಕೊಳ್ಳುವುದಕ್ಕೂ ಸಹ ಅವಕಾಶ ಇಲ್ಲವಾಗಿದೆ. ಸರಕಾರದವರು ಮೊದಲು ಅವ ರನ್ನು ಸ್ಥಳಾಂತರಿಸಿ ಅನುಕೂಲ ಮಾಡಿದ ನಂತರ ಅವರ ಊರನ್ನು ಬಿಡಿಸಬೇಕು. ಇಲ್ಲದಿದ್ದರೆ ಈ ರೀತಿ ಯಾಗಿ ಜನರಿಗೆ ಬಹಳ ತೊಂದರೆ ಆಗುತ್ತದೆ. ಅಲ್ಲಿ ಗೊಂದಲ ಆಗುವ ಪರಿಸ್ಥಿತಿ ಇದೆ. 30 ಸಾವಿರ ರೂಪಾಯಿಗಳ ಬದಲು ಕೇವಲ ಮೂರು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಆದ್ದರಿಂದ ಈಗ ಮಾನ್ಯಮಂತ್ರಿಗಳು ಆದಷ್ಟು ಬೇಗ ಹೆಚ್ಚಿನ ಹಣವನ್ನು ಕೊಡುವ ಬಗ್ಗೆ ನಮಗೆ ಆಶ್ವಾಸನೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ).—ಮಾನ್ಯ ಅಧ್ಯಕ್ಷರೇ ಇದು ಬಹಳ ಮುಖ್ಯವಾದ ಪ್ರಶ್ನೆ. ರೈತರು ಇದರ ಬಗ್ಗೆ 15ನೇ ತಾರೀಖಿನಿಂದ ಮುಷ್ಕರ ಮಾಡುತ್ತಿದ್ದಾರೆ. ನೋಟೀಸ್ ಕೊಟ್ಟಿದ್ದಾರೆ. ತಾವು ರೈತರ ಸಹಕಾರವನ್ನು ಇಲ್ಲಿ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನವಲಗುಂದ, ನರಗುಂದದಲ್ಲಿ ಯಾವರೀತಿ ಗಲಾಟೆ ನಡೆಯಿತು. ಆದೇ ರೀತಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಆಗಬಾರದು ಎನ್ನುವ ದೃಷ್ಟಿ ಯಿಂದ ನಿಮ್ಮ ಮುಂದೆ ನಾನು ಇದನ್ನು ಹೇಳುತ್ತಿದ್ದೇನೆ. ಎಲ್ಲಿಯ ರೈತರು ಬಹಳ ದಿನಗಳಿಂದ ತಮಗೆ ಪರಿಹಾರ ಕೊಡಬೇಕೆಂದು ತಾಳ್ಮೆಯಿಂದ ಸರಕಾರಕ್ಕೆ ಕೇಳಿಕೊಂಡು ಕಾದು, ಕಾದು, ಬೇಸತ್ತು ಹೋಗಿದ್ದಾರೆ. ಇವರ ತಾಳ್ಮೆ ಮೀರಿ ಹೋದಾಗ ಅಲ್ಲಿ ರಕ್ತಪಾತ ಆಗುತ್ತದೆ. ಅಂತಹ ಪ್ರಸಂಗ ಬೀದರ್ ಜಿಲ್ಲೆಯಲ್ಲಿ ಬಂದಿದೆ. ಇದನ್ನು ನಾನು ಇಲ್ಲಿ ಒತ್ತಿ ಹೇಳುತ್ತಿದ್ದೇನೆ. ಲ್ಯಾಂಡ್ ಆಕ್ವಿಸಿಷನ್ ಬಗ್ಗೆ ಮಾನ್ಯ ಪಾಟೀಲರು ಹೇಳಿದರು. ಈ ವಿಚಾರದ ಬಗ್ಗೆ ರೈತರು ಕೆಲವಾರು ಸಾರಿ ಸರಕಾರಕ್ಕೆ ರೆಪ್ರಸೆಂಟೇಶನ್ ಮಾಡಿದ್ದರು. ಆದರಂತೆ ಶ್ರೀ ಗುಂಡೂರಾವ್ ಅವರು ಮುಖ್ಯಮಂತ್ರಿಯವರಾಗಿದ್ದ ಕಾಲದಲ್ಲಿ ಸಾಕಷ್ಟು ರೆಪ್ರಸೆಂಟೇಶನ್ ಮಾಡಿದ್ದರು. ಈಗ ಕೂಡಾ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಕೊಟ್ಟಿದ್ದಾರೆ. ಇದುವರೆಗೆ ಏನೊಂದೂ ಪರಿಹಾರವೂ ಅವರಿಗೆ ದೊರಕಲಿಲ್ಲ. ಈ ದಿವಸ ರೈತರಿಗೆ ಬೇರೆ ಯಾವ ಆದಾಯವೂ ಇಲ್ಲ. ಬೆಳೆಗಳಿಗೆ ದೊರಕುವ ಬೆಲೆಯೂ ಸಹ ಸರಿಯಾಗಿಲ್ಲ. ಅವರಿಗೆ ಎಷ್ಟು ಪರಿಹಾರ ಸಿಕ್ಕ ಬೇಕೋ ಅಷ್ಟು ಪರಿಹಾರ ಸಿಗಲಿಲ್ಲ.

Speaker.—Let us not go into the details of the matter under Rule 334. You can only bring it to the notice of the House.

Sri Bheemanna Khannre.—What ?

Speaker.—Whatever you want to say.

ಶ್ರೀ ಭೀಮಣ್ಣ ಖಂಡ್ರೆ.—They should know what I am telling. ಪರಿಹಾರದ ಬಗ್ಗೆ ಸರಕಾರದವರು ಯಾವರೀತಿಯಲ್ಲಿ ಕೊಡುತ್ತಿದ್ದಾರೆಂದು ನಾವು ಇಲ್ಲಿ ತಿಳಿದುಕೊಳ್ಳಬೇಕಾಗಿದೆ. ರೂಲ್ಸ್ ಪ್ರಕಾರ ಏನು ನಡೆಯುತ್ತಿದೆ ಆ ಪ್ರಕಾರ ತಾವು ಕೊಡಬಹುದು. ಆದಕ್ಕೋಸ್ಕರ ನಾನು ಈ ವಿಚಾರವನ್ನು 334ರ ಕೆಳಗೆ ಪ್ರಸ್ತಾಪಮಾಡಲು ನೋಟೀಸ್ ಕೊಟ್ಟಿದ್ದೇನೆ. ಈ ಸದನದಲ್ಲಿ ಈ ವಿಚಾರದ ಬಗ್ಗೆ ಸರಕಾರದ ಗಮನ ಸೆಳೆಯುವುದಕ್ಕೆ ಕಾರಣ ಇಷ್ಟೆ. ಸರಕಾರದವರು ಒಂದು ಎಕರೆಗೆ ಎರಡು ಸಾವಿರ, ಮೂರು ಸಾವಿರ ರೂಪಾಯಿಗಳ ಪರಿಹಾರ ಕೊಡುತ್ತಿದ್ದಾರೆ. ಆದರೆ ಅಲ್ಲಿ ಜಮೀನಿನ ಬೆಲೆ ಒಂದು ಎಕರೆಗೆ 30 ಸಾವಿರ ರೂಪಾಯಿಗಳವರೆಗೆ ಇದೆ. ಈ ಮೂರು ಸಾವಿರ ರೂಪಾಯಿಗಳನ್ನು ಕೊಡುವಾಗ ಅದರಲ್ಲಿ ಮತ್ತೆ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟ್‌ಗಾಗಿ ಬೇರೆ ಕಟ್ ಮಾಡುತ್ತಿದ್ದಾರೆ. ಸರಕಾರದವರು ರೈತರಿಗೆ ಸೀಡ್ ಲೋನ್ ಏನು ಕೊಟ್ಟಿದ್ದೀರೋ ಆ ಸೀಡ್ ಜರ್ಮಿನೇಶನ್ ಆಗದೆ ಬೆಳೆ ಕೆಟ್ಟು ಹೋಗಿದೆ. ಅಲ್ಲಿ ಸ್ಮಾಲ್ ಫಾರಮರ್ಸ್ ಮತ್ತು ಮಾರ್ಜಿನಲ್ ಫಾರಮರ್ಸ್ ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ. ಮತ್ತು ಅವರು ಪರಿಹಾರಕ್ಕಾಗಿ ಸರಕ ರವನ್ನು ಎದುರು ನೋಡುತ್ತಿದ್ದಾರೆ. ಸರಕಾರದವರು ಸರಿಯಾದ ರೀತಿ ನಿರ್ಣಯ ತೆಗೆದುಕೊಳ್ಳದಿದ್ದರೆ ಅಲ್ಲಿ ರಕ್ತಪಾತ ಆಗುತ್ತದೆ. ಆವರಿಗೆ ಕೂಡಲೇ ಸರಿಯಾದ ಪರಿಹಾರ ಕೊಡಬೇಕು. ರಾಜ್ಯ ಸರ್ಕಾರದವರು ಈ ಪ್ರಾಜಕ್ಟ್‌ಗೆ ಭೂಮಿಯನ್ನು ತೆಗೆದುಕೊಂಡ ಮೇಲೆ ಅಲ್ಲಿದ್ದಂತಹ ಜನರಿಗೆ ಇರಲಿಕ್ಕೆ ಜಾಗವನ್ನು ಕೊಡಬೇಕು. ನೌಭಾದ್‌ನಲ್ಲಿ ಜಾಗವನ್ನು ತೆಗೆದುಕೊಂಡು ಅವರಿಗೆಕೊಡುವುದೆಂದು ತೀರ್ಮಾನ ಮಾಡಿದ್ದಾರೆಂದು ಗೊತ್ತಾಗಿದೆ. ಇದೇ ನವೆಂಬರ್‌ನಲ್ಲಿ ಇಂಡಸ್ಟ್ರೀಸ್‌ಗಳನ್ನು ಮಾಡುವುದಕ್ಕೋಸ್ಕರ 1 ಸಾವಿರ ಎಕರೆ ಜಮೀನನ್ನು ತೆಗೆದುಕೊಂಡಿದ್ದಾರೆ. ಭೂಮಿಯನ್ನು ಕಳೆದುಕೊಂಡಂತಹ ರೈತರಿಗೆ ಬೆಲ್ಲಹಳ್ಳಿಯಲ್ಲಿ ಜಾಗವನ್ನು ಕೊಡುತ್ತಾರೆಂದು ತಿಳಿದು ಬಂದಿದೆ. ಇದು ಕಮಾಲಪುರಕ್ಕೆ ಹತ್ತಿರವಾಗಿದೆ. ಅಲ್ಲಿ ಭೂಸಿಯು ಬ್ಲಾಕ್ ಸಾಯಿಲ್‌ನಿಂದ ಕೂಡಿದೆ. ಅಲ್ಲಿ ಮನೆಗಳನ್ನು ಕಟ್ಟಲು ಸುಮಾರು 10–12 ಅಡಿ ಆಳವಾಗಿ ಪಾಯ ಹಾಕಬೇಕಾಗುತ್ತದೆ. ನೀವು ಮನೆಗಳನ್ನು ಕಟ್ಟಲು ಕೊಡುವ 2 ಸಾವಿರ ರೂಪಾಯಿಗಳು, ಈ ಪಾಯ ಹಾಕುವುದಕ್ಕೇ ಸಾಕಾಗುವುದಿಲ್ಲ. ಇನ್ನು ಮನೆ ಕಟ್ಟುವುದೆಲ್ಲಿ ? ಇದರ ಬಗ್ಗೆ ನಾನು ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿದಾಗ ಅವರು ಹಿಂದಿನವರು ಏನೋ ಮಾಡಿದ್ದಾರೆ I am fully satisfied that it is not fit for dwelling ಎಂದು ಹೇಳಿದ್ದಾರೆ. ಇದು ಸರಕಾರದ inability ಈ ವಿಚಾರವನ್ನು 15 ದಿವಸದೊಳಗಾಗಿ ಸರಿಪಡಿಸದಿದ್ದರೆ ನಮ್ಮ ಜಿಲ್ಲೆಯಲ್ಲಿ ಬೆಂಕಿ ಹತ್ತಿಕೊಳ್ಳುವುದಕ್ಕೆ ಪ್ರಾರಂಭವಾಗುತ್ತದೆ. ಇದು ಆಗ ಬಾರದು. ನೌಭಾದ್‌ನಲ್ಲಿ ಏನು ಜಾಗ ಇದೆ, ಆ ಜಾಗಕ್ಕೆ ಜನರನ್ನು shift ಮಾಡುವ ಕೆಲಸವನ್ನು ಮಾಡಬೇಕು. ಅಲ್ಲಿಗೆ ಬೋರ್‌ವೆಲ್‌ಗಳು, ನಳಗಳು, ದೇವಸ್ಥಾನಗಳು, ಸ್ಕೂಲ್‌ಗಳು ಇವೆಲ್ಲವನ್ನು ಕೊಟ್ಟನಂತರ ಆವರನ್ನ shift ಮಾಡಿಸಬೇಕು. ಇದರ ಬಗ್ಗೆ within three days you please take a decision and take action. Otherwise, what incident took place at Nargund and Navalgund may again occur here also. I am warning this government.

ಶ್ರೀ ವಿ.ಎಲ್. ಪಾಟೀಲ್ (ಕಂದಾಯ ಸಚಿವರು).—ಮಾನ್ಯ ಸಭಾಧ್ಯಕ್ಷರೇ, ಈ ಬಗ್ಗೆ ಈಗಲೇ ಡೀಟೇಲ್ ಆಗಿ ಉತ್ತರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಸದಸ್ಯರು ಈಗ ತಾನೇ ಆ ಜಿಲ್ಲೆಯ ಬಗ್ಗೆ ಗಮನ ಸೆಳೆದಿದ್ದಾರೆ. ನಾನು ಡೀಟೇಲ್ ಆಗಿ ಮಾಹಿತಿಗಳನ್ನು ತರಿಸಿಕೊಂಡು ಸರ್ಕಾರದಿಂದ ಸಧ್ಯಕ್ಕೆ ಎಷ್ಟು ಸಾಧ್ಯತೆ ಇದೆಯೋ ಅಷ್ಟನ್ನೂ ಮಾಡಲಿಕ್ಕೆ ಪ್ರಯತ್ನಪಡುತ್ತೇನೆ.

ಶ್ರೀ ಬಸವರಾಜ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಕಾಂಪನ್‌ಸೇಷನ್ ವಿಚಾರದಲ್ಲಿ ಸರ್ಕಾರವು ಏನೂ ಹೇಳಲಿಲ್ಲ. ಸರ್ಕಾರವು ಇದರಬಗ್ಗೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳದಿದ್ದರೆ, ನಿಜವಾಗಿ ನಾವು ಅಲ್ಲಿಗೆ ಹೋಗುವುದು ಕಷ್ಟವಾಗುತ್ತದೆ. ರೈತರು ನಮ್ಮನ್ನು ಫೆರಾವ್ ಮಾಡುವ ಪರಿಸ್ಥಿತಿ ಬಂದಿದೆ. ನಾವು ಅವರಿಗೆ ಈಗ ಸರಿಯಾದ ಉತ್ತರವನ್ನು ಕೊಡಬೇಕಾಗಿದೆ. ಮಂತ್ರಿಗಳ ಉತ್ತರ ಗೋಲ್‌ಮಾಲ್ ರೀತಿ ಇದೆ. ಮನೆ ಇಲ್ಲದವರಿಗೆ ಮನೆ ಕಟ್ಟಿಸಿಕೊಡುತ್ತೇವೆಂದು, ರೋಡ್‌ಗಳನು ಮಾಡುಸುತ್ತೇವೆಂದು ಏನಾದರೂ ತಾವು ಸ್ಪೆಸಿಫಿಕ್ ಆಗಿ ಹೇಳಬೇಕು. ನಾವು ಇಷ್ಟು ವಿಸ್ತಾರವಾಗಿ ಹೇಳಿದರೂ ತಾವು ಸರಿಯಾಗಿ ಉತ್ತರ ಕೊಡಲಿಲ್ಲ.

Mr. Speaker.—Under 334 I cannot force the Hon'ble Minister to reply. right now. ತಾವು ವಿಷಯ ಹೇಳಿದ ತಕ್ಷಣ ಅವರು ಹೇಗೆ ಹೇಳಬೇಕು ?

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೇ, ನಾನು ಕೇಳಿದುದು ಮಾನ್ಯ ಮಂತ್ರಿಗಳಿಗೆ ಅರ್ಥವಾಗದೇ ಇದ್ದರೆ ನಾನು ಹೇಳಿ ಏನು ಪ್ರಯೋಜನ ?

(iii) ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಕಾವಲುಗಾರ ಶ್ರೀ ಸಿದ್ದಪ್ಪನು ಮೃತಪಟ್ಟ ಬಗ್ಗೆ.

ಶ್ರೀ ವೈ. ರಾಮಕೃಷ್ಣ (ಆನೇಕಲ್).—ಮಾನ್ಯ ಅಧ್ಯಕ್ಷರೇ, ಬನ್ನೇರುಘಟ್ಟದಲ್ಲಿ ರಾಷ್ಟ್ರೀಯ ಉದ್ಯಾನವನ ಇದೆ. ಈ ರಾಷ್ಟ್ರೀಯ ಉದ್ಯಾನವನವನ್ನು ನೋಡಲಿಕ್ಕೋಸ್ಕರವಾಗಿ 2 ಮಿನಿ ಬಸ್ ಗಳನ್ನು ಸರ್ಕಾರದವರು ಇಟ್ಟಿದ್ದಾರೆ. ರಾಷ್ಟ್ರೀಯ ಉದ್ಯಾನವನದ ವಾಚ್‌ಮನ್ ಸಿದ್ದಪ್ಪ ಎನ್ನುವವರು ಹರಿಜನರಾಗಿದ್ದಾರೆ. ಅವರು ಸುಮಾರು 12 ವರ್ಷಗಳಿಂದ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಕಳೆದ 23ನೇ ತಾರೀಕು ಕೆಲಸದ ವೇಳೆ ಮುಗಿದ ಮೇಲೆ ಸಂಜೆ ಐದುವರೆ ಘಂಟೆಗೆ ಮನೆಗೆ ಹೋದರು. ಸಾಯಂಕಾಲ ನ್ಯಾಷನಲ್ ಪಾರ್ಕಿನ ಮಿನಿ ಬಸ್‌ನ ಡ್ರೈವರುಗಳು ಅವರ ಮನೆಗೆ ಬಂದು ನಿನ್ನನ್ನು ಸಾಹೇಬರು ಕರೆಯುತ್ತಿದ್ದಾರೆ ಬಾ ಎಂದು ಕರೆದಾಗ, ಸಿದ್ದಪ್ಪನು ಏಕೆ ಎಂದು ಕೇಳಿದ. ಅದು ನಮಗೆ ಗೊತ್ತಿಲ್ಲ. ಅರ್ಜೆಂಟ್ ಕರೆದುಕೊಂಡು ಬಾ ಎಂದು ಮಾತ್ರ ಹೇಳಿದ್ದಾರೆಂದು ಹೇಳಿ ಉದ್ಯಾನವನಕ್ಕೆ ಕರೆದುಕೊಂಡು ಹೋಗಿದ್ದಾರೆ. ಉದ್ಯಾನವನಕ್ಕೆ ಹೋದ ಮೇಲೆ ಏನಾಯಿತು ಎನ್ನುವುದು ಯಾರಿಗೂ ಗೊತ್ತಿಲ್ಲ. ಬೆಳಿಗ್ಗೆ ಅವರ ಪತ್ನಿಗೆ ನಿಮ್ಮ ಯಜಮಾನರಿಗೆ ತೀವ್ರ ಗಾಯವಾಗಿದೆ ತಾವು ಹೋಗಿ ನೋಡಿ ಎಂದು ಯಾರೋ ಹೇಳಿದರು. ಅಲ್ಲಿ ಹೋಗಿ ನೋಡಿದರೆ ಅವನು ಸತ್ತು ಹೋಗಿದ್ದಾನೆ. ಅಂದು ರಾತ್ರಿ 7 ಘಂಟೆಗೆ ಸಿದ್ದಪ್ಪನನ್ನು ಮಿನಿ ಬಸ್‌ನ ಡ್ರೈವರುಗಳು ಕರೆದುಕೊಂಡು ಹೋಗಿ ಅಲ್ಲಿ ಏನು ಮಾಡಿದ್ದಾರೆ? ಅವನು ಯಾವ ರೀತಿ ಸತ್ತ ? ಎನ್ನುವಂತಹ ವಿಷಯ ಯಾರಿಗೂ ಗೊತ್ತಿಲ್ಲ. ಪೇಪರಿನಲ್ಲಿ ಆನೇಕಲ್, ಮಾ. 26—ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಬಳಿ ಇರುವ ಲಯನ್ಸ್ ಸಫಾರಿ ರಸ್ತೆಯಲ್ಲಿ ಶುಕ್ರವಾರ ರಾತ್ರಿ ಉದ್ಯಾನವನಕ್ಕೆ ಸೇರಿದ ಮಿನಿ ಬಸ್ಸೊಂದು ಮಗುಚಿಕೊಂಡು ಪಾರ್ಕ್‌ನ ವಾಚ್‌ಮನ್ ಸಿದ್ದಪ್ಪ (28) ಎಂಬವರು ಮೃತಪಟ್ಟಿದ್ದಾರೆ. ಸರ್ಕಲ್ ಇನ್ಸ್‌ಪೆಕ್ಟರ್ ಮಹಾಲಿಂಗಯ್ಯ ಚಾಲಕನನ್ನು ಬಂದಿಸಿದ್ದಾರೆ. ಎಂದು ವರದಿಯಾಗದೆ.

ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಈ ಸಾವು ಹೇಗೆ ಆಯಿತು ಎಂಬ ಬಗ್ಗೆ ಸತ್ಯ ಹೊರಗೆ ಬರಬೇಕು. ಆತನಿಗೆ 3 ಮಕ್ಕಳು ಇದ್ದಾರೆ. ಅಲ್ಲದೆ ಅವನು ಹರಿಜನನಾಗಿದ್ದಾನೆ. ಅವರು ಜೀವನಕ್ಕೆ ಏನೂಗತಿ ಇಲ್ಲದೆ ಇರತಕ್ಕಂತಹರು. ಡ್ರೈವರ್‌ಗಳು ಅವನನ್ನ ಕರೆದುಕೊಂಡು ಹೋಗಿ ಏನು ಮಾಡಿದ್ದಾರೆ ಎಂಬುದು ನನಗೆ ಚೆನ್ನಾಗಿ ಗೊತ್ತಿದೆ. ಅದನ್ನು ಇಲ್ಲಿ ಬಹಿರಂಗವಾಗಿ ಹೇಳುವುದು ಬೇಡ. ಸರ್ಕಾರದವರು ಕೂಡಲೇ ಈ ಬಗ್ಗೆ ಸಿ. ಒ. ಡಿ. ತನಿಖೆ ನಡೆಸಿದರೆ ಸಾಯಂಕಾಲದ ಒಳಗೆ ಅಪರಾಧಿಗಳು ಪತ್ತೆಯಾಗುತ್ತಾರೆ. ಸಿದ್ದಪ್ಪನು ಏನು ಗತಿ ಇಲ್ಲದಂತಹವನಾಗಿರುವುದರಿಂದ ಸರ್ಕಾರದವರು ಅವನ ಕುಟುಂಬಕ್ಕೆ ಏನಾದರೂ ಪರಿಹಾರ ಒದಗಿಸಿಕೊಡಬೇಕು.

ಶ್ರೀ ರಮೇಶ್ ಸಿ. ಜಗಜಿಣಗಿ (ರಾಜ್ಯ ಗೃಹ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ದಿನಾಂಕ 24-3-1984ರಂದು ಬೆಳಿಗ್ಗೆ 10 ಘಂಟೆ ಸಮಯದಲ್ಲಿ ಬನ್ನೇರುಘಟ್ಟ ರೇಂಜ್ ಅರಣ್ಯಾಧಿಕಾರಿಯಾದ ದಯಾನಂದ್‌ರವರು ಅರಣ್ಯಾಧಿಕಾರಿ ಶ್ರೀ ಶಂಕರ್‌ರವರ ಮುಖಾಂತರ ಆನೇಕಲ್ ಆರಕ್ಷಕ ಠಾಣೆಗೆ ಒಂದು ಫಿರ್ಯಾದಿ ಸಲ್ಲಿಸಿದರು. ಆ ಫಿರ್ಯಾದಿತ್ತಲ್ಲಿ ದಿನಾಂಕ ; 23-3-84ರಂದು ರಾತ್ರಿ 9 ಘಂಟೆ ಸಮಯದಲ್ಲಿ ಬನ್ನೇರುಘಟ್ಟದ ಅರಣ್ಯ ಇಲಾಖೆಗೆ ಸೇರಿದ ಮಿನಿ ಬಸ್ ಸಿ. ಎ. ಜಿ. 371ರ ಚಾಲಕ ಶ್ರೀ ಸಂಪಂಗಿಯವರು ವಾಹನವನ್ನು ಅಜಾಗರೂಕತೆಯಿಂದ ಹಿಂದಕ್ಕೆ ತೆಗೆದುಕೊಂಡಾಗ ಸಫಾರಿ ವಾಚ್ ಮಾನ್ ಶ್ರೀ ಸಿದ್ದಪ್ಪರವರಿಗೆ ತೀವ್ರ ಸ್ವರೂಪವಾದ ಗಾಯಗಳಾಗಿ ಆತನು ಸ್ಥಳದಲ್ಲೆ ಮೃತನಾದ ನೆಂದು ತಿಳಿಸಲಾಗಿದೆ. ಆ ಮೇರೆಗೆ ಆನೇಕಲ್ ಆರಕ್ಷಕ ಠಾಣೆಯಲ್ಲಿ ಅಪರಾಧ ಕ್ರಮಾಂಕ : 61 : 84, ಕಲಂ 304 (ಕ) ಭಾರತೀಯ ದಂಡ ಸಂಹಿತೆ ಪ್ರಕಾರ ಮೊಕದ್ದಮೆ ನೊಂದಾಯಿಸಿಕೊಂಡು ತನಿಖೆ ಮುಂದುವರಿಯುತ್ತಿದೆ. ವಾಹನ ಚಾಲಕ ಶ್ರೀ ಸಂಪಂಗಿ ಎನ್ನುವವರನ್ನು 24-3-84 ರಂದು ದಸ್ತಗಿರಿ ಮಾಡಿ ಮ್ಯಾಜಿಸ್ಟ್ರೇಟರ್ ಮುಂದೆ ಹಾಜರ್ಪಡಿಸಿದ್ದಾರೆ. ಈ ಅಘಾತದ ಸುದ್ದಿ ತಿಳಿದ ತಕ್ಷಣ ಆರಕ್ಷಕ ಉಪ ನಿರೀಕ್ಷಕರು, ವೃತ್ತ ಆರಕ್ಷಕ ನಿರೀಕ್ಷಕರು ಮತ್ತು ಉಪಾಧಿಕ್ಷಕರು ಸ್ಥಳಕ್ಕೆ ಬೇಟಿ ಇತ್ತಿದ್ದಾರೆ. ವೃತ್ತ ಆರಕ್ಷಕ ನಿರೀಕ್ಷಕರು ತಪಾಸಣೆ ನಡೆಸುತ್ತಿದ್ದಾರೆ.